# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

ಸಂ/ಕರಾಸಾ/ಮಂಡ್ಯ.ವಿ/ಸಂ/ವಾ/ 295 /2016-17 ದಿನಾಂಕ:- 12/07/2016

## ಸಂಧಾನ ಪ್ರಕಟಣೆ ಸಂ.08/2016-17

ಕ.ರಾ.ರ.ಸಾ.ನಿಗಮ ಮಂಡ್ಯ ವಿಭಾಗಕ್ಕೆ ಸೇರಿದ ಈ ಕೆಳಗಿನ ವಾಹನ ನಿಲ್ದಾಣದಲ್ಲಿ ಖಾಲಿಯಿರುವ, ವಾಣಿಜ್ಯ ಮಳಿಗೆಯನ್ನು ಪಡೆಯಲು ಪ್ರತಿ ವರ್ಷ ಶೇ.10 ರಷ್ಟು ಪರವಾನಗಿ ಶುಲ್ಕದ ಹೆಚ್ಚಳದೊಂದಿಗೆ **ತೆರೆದ ಸ್ಥಳದಲ್ಲಿ ವಾಣಿಜ್ಯ ಮಳಿಗೆ ನಡೆಸಲು 03 ವರ್ಷದ ಅವಧಿಗೆ ಶಾಶ್ವತ ಮಳಿಗೆಗೆ 05 ವರ್ಷದ ಅವಧಿಗೆ** ಪರವಾನಗಿದಾರರನ್ನು ಸಂಧಾನ ಮೂಲಕ ಆಯ್ಕೆ ಮಾಡಲು ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇಚ್ಚೆಯುಳ್ಳವರು ಸಂಬಂಧಿಸಿದ ಮಳಿಗೆಯ ಮುಂದೆ ಸೂಚಿಸಿರುವ ಇ.ಎಂ.ಡಿ. ಮೊತ್ತವನ್ನು **ರಾಷ್ಟ್ರೀಕೃತ ಬ್ಯಾಕಿನಿಂದ "ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗ"** ರವರ ಹೆಸರಿನಲ್ಲಿ ಡಿ.ಡಿ.ಯನ್ನು **ದಿನಾಂಕ:-02-08-2016ರ ಸಮಯ.11.30**ರೊಳಗೆ ಪಡೆದುಕೊಳ್ಳುವುದು. ವಿವರಗಳು ಈ ಕೆಳಕಂಡಂತಿದೆ.

**ಸುತ್ತೋಲೆ ಸಂ.492ರಂತೆ ಸಂಧಾನಕ್ಕೆ ಒಳಪಡುವ ಮಳಿಗೆಗಳ ವಿವರ**

| ಕ್ರ. ಸಂ. | ಬಸ್ ನಿಲ್ದಾಣ | ಮಳಿಗೆಯ ಹೆಸರು | ವಿಸ್ತೀರ್ಣ ಚದರ ಅಡಿ | ಅವಧಿ. | ಮಿತ ವ್ಯಯ ಶುಲ್ಕ ರೂ. | ಇ.ಎಂ.ಡಿ.ರೂ |
|---|---|---|---|---|---|---|
| 1 | ಮಂಡ್ಯ | ಉಪಹಾರ ಗೃಹ (1ನೇ ಬಾರಿಗೆ) (ದಿ:06.08.2016ರಿಂದ ಖಾಲಿಯಾಗಲಿದೆ) | 2982.5 | 5 ವರ್ಷ | 1,27,530.00 | 3,82,590.00 |
| 2 | ಮದ್ದೂರು | ಜನರಲ್ ಸ್ಟಾಲ್-6 (1ನೇ ಬಾರಿಗೆ) | 276.6 | 5 ವರ್ಷ | 12,555.00 | 37,665.00 |
| 3 | ಮದ್ದೂರು | ಜನರಲ್ ಸ್ಟಾಲ್-2 (1ನೇ ಬಾರಿಗೆ) | 69.61 | 5 ವರ್ಷ | 36,611.00 | 1,09,833.00 |
| 4 | ಮಂಡ್ಯ | ಜನರಲ್ ಸ್ಟಾಲ್-3 (ತೆರೆದ ಸ್ಥಳ) (2ನೇ ಬಾರಿಗೆ) (ಪರಿಶಿಷ್ಟ ಜಾತಿಗೆ ಮೀಸಲು)(26.08.2016 ರಿಂದ ಖಾಲಿಯಾಗಲಿದೆ) | 10'*10'=100 | 3 ವರ್ಷ | 15,021.00 | 45,063.00 |
| | | **ಸುತ್ತೋಲೆ ಸಂ.821ರಂತೆ ಸಂಧಾನಕ್ಕೆ ಒಳಪಡುವ ಮಳಿಗೆಗಳ ವಿವರ** | | | | |
| 1 | ಚಿನಕುರಳಿ | ಮೊದಲ ಮಹಡಿ (ಜನರಲ್ ಸ್ಟಾಲ್-2)(4ನೇ ಬಾರಿಗೆ) | 1300.13 | 5 ವರ್ಷ | - | 58,425.00 |
| 2 | ಹಲಗೂರು | ಜನರಲ್ ಸ್ಟಾಲ್-2 (4ನೇ ಬಾರಿಗೆ) | 123.42 | 5 ವರ್ಷ | - | 3,250.00 |
| 3 | ಮೇಲುಕೋಟೆ | ಜನರಲ್ ಸ್ಟಾಲ್-1 (4ನೇ ಬಾರಿಗೆ) | 198.04 | 5 ವರ್ಷ | - | 4,500.00 |
| 4 | ಮೇಲುಕೋಟೆ | ಜನರಲ್ ಸ್ಟಾಲ್-2 (4ನೇ ಬಾರಿಗೆ) | 198.04 | 5 ವರ್ಷ | - | 3,000.00 |

ದಿನಾಂಕ:-02.08.2016 ರಂದು ಸಮಯ:11.45ಕ್ಕೆ **ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗ, ಕ.ರಾ.ರ.ಸಾ. ನಿಗಮ, ಮಂಡ್ಯ ಬಸ್‌ನಿಲ್ದಾಣ, ಮಂಡ್ಯದಲ್ಲಿ** ಸಂಧಾನ ನಡೆಸಲಾಗುವುದು. ಬರೆದ ಅರ್ಜಿಯೊಂದಿಗೆ ಇ.ಎಂ.ಡಿ.ಬಾಬ್ತಿನ ಮೂಲ ಡಿ.ಡಿ, ಪಾನ್ ಕಾರ್ಡ್ ಮತ್ತು ವಿಳಾಸ ನಕಲು ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಯವರಿಂದ ದೃಢೀಕರಿಸಿ ಸಲ್ಲಿಸುವುದು ಹಾಗೂ ಮೂಲ ಪ್ರತಿಗಳನ್ನು ಸಂಧಾನದಲ್ಲಿ ಪರಿಶೀಲಿಸುವಾಗ ಸಲ್ಲಿಸುವುದು. ಭಾಗವಹಿಸಲು ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗ, ಮಂಡ್ಯ ಬಸ್ ನಿಲ್ದಾಣ, ಮಂಡ್ಯರವರಲ್ಲಿ** ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ:7760990661 ಮತ್ತು ವಿಭಾಗೀಯ ಸಂಚಲನಾಧಿಕಾರಿ ಮೊಬೈಲ್ ಸಂಖ್ಯೆ:7760990652.

ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗ, ಮಂಡ್ಯ

# <u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ</u>

<u>ಷರತ್ತು ಮತ್ತು ನಿಬಂಧನೆಗಳು:-</u>

1. ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ.10 ರಷ್ಟು ಹೆಚ್ಚಾಗುವುದು.
2. ಮಳಿಗೆಗಳನ್ನು ಉಪಯೋಗಿಸುವ ಉದ್ದೇಶವನ್ನು ಸಂಧಾನ ಅರ್ಜಿಯಲ್ಲಿ ನಮೂದಿಸಬೇಕು. ಸಂಧಾನ ಅರ್ಜಿಯಲ್ಲಿ ಸೂಚಿಸಿರುವ ವ್ಯಾಪಾರವನ್ನು ಮಾಡಲು ಮಾತ್ರ ಅವಕಾಶವಿರುತ್ತದೆ.
3. ಸಂಧಾನದಲ್ಲಿ ಭಾಗವಹಿಸುವಾಗ ಇ.ಎಂ.ಡಿ ಹಣದ ಡಿ.ಡಿ.ಯ ಮೂಲ ಪ್ರತಿಯನ್ನು ಅರ್ಜಿಯೊಂದಿಗೆ ನೀಡಿ ಸಂಧಾನದಲ್ಲಿ ಭಾಗವಹಿಸುವುದು,
4. ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ ಪದಾರ್ಥ ಸಾಮಾಗ್ರಿ, ನೀರಿನ ಪೊಟ್ಟಣ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ದಿಷ್ಟಪಡಿಸಿದ ಬೆಲೆಗೆ ಮಾರಾಟ ಮಾಡುವುದು.
5. ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷೆನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ ಹಾಗೂ ಕೂಡಲೇ ವ್ಯವಹಾರ ಪ್ರಾರಂಭಿಸಬೇಕಾಗಿರುತ್ತದೆ.
6. ಆಯ್ಕೆ ಆದ ಪರವಾನಗಿದಾರರು ಸೂಚಿಸಿರುವ ಪರವಾನಿಗೆ ಶುಲ್ಕದ (6+3) ಒಂಭತ್ತು (09) ತಿಂಗಳ ಮೊತ್ತವನ್ನು ಪಾವತಿಸಬೇಕಿದ್ದು ಅದರದಲ್ಲಿ 3 ತಿಂಗಳ ಮೊತ್ತವನ್ನು ಸಂಧಾನ ದಿನವೇ ಭದ್ರತಾ ಠೇವಣಿಯಾಗಿ ಪಾವತಿಸುವುದು. ಉಳಿಕೆ 3 ತಿಂಗಳ ಭದ್ರತಾ ಠೇವಣಿ ಮೊತ್ತವನ್ನು ಹಾಗೂ 1 ತಿಂಗಳ ಮುಂಗಡ ಪರವಾನಗಿ ಶುಲ್ಕವನ್ನು, ತಾವು ಸಲ್ಲಿಸಿರುವ ಇಎಂಡಿ ಹಣವನ್ನು ಹೊಂದಾಣಿಕೆ ಮಾಡಿಕೊಂಡು 3 ದಿನದೊಳಗೆ ಪಾವತಿಸಿ ಕರಾರು ಮಾಡಿಕೊಳ್ಳುವುದು (ಉಳಿಕೆ 3 ತಿಂಗಳ ಮೊತ್ತವನ್ನು 3ನೇ ವರ್ಷ ಮುಗಿಯುವುದರೊಳಗಾಗಿ ಪಾವತಿಸುವುದು). ಸಂಧಾನದಲ್ಲಿ ಆಯ್ಕೆಯಾದ ಕೂಡಲೇ ಡಿ.ಡಿ.ಯನ್ನು "ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ಮಂಡ್ಯ ವಿಭಾಗ" ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಮಾತ್ರ ಪಡೆದಿರಬೇಕು ಅಥವ ನಗದು ರೂಪದಲ್ಲಿ ಪಾವತಿಸುವುದು. ನಿಗದಿತ ಸಮಯಕ್ಕೆ ಭದ್ರತಾ ಠೇವಣಿ ಪಾವತಿಸದಿದ್ದ ಪಕ್ಷದಲ್ಲಿ ನಿಗಮಕ್ಕೆ ಪಾವತಿಸಿರುವ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. . (ರೂ25,000/– ಕ್ಕಿಂತ ಹೆಚ್ಚಿನ ಬಿಡ್ಡಾದಲ್ಲಿ ಅಥವಾ ನಿಗಧಿತ ಪರವಾನಗಿ ಶುಲ್ಕಕ್ಕಿಂತ ಕಡಿಮೆ ಸೂಚಿಸಿದ್ದಲ್ಲಿ ಕೇಂದ್ರ ಕಛೇರಿಯ ಅನುಮೋದನೆಯೊಡನೆ ಎರಡನೆ ಕಂತಿನ ಭದ್ರತಾ ಠೇವಣಿ ಹಣವನ್ನು ಪಾವತಿಸಿ ಕರಾರು ಮಾಡಿಕೊಳ್ಳುವುದು ಹಾಗೂ ಕೇಂದ್ರ ಕಛೇರಿಯ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು.).
7. ಆಯ್ಕೆಗೊಂಡ ಪರವಾನಗಿದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಶೇ.15% (ಪ್ರಸ್ತುತ ದರ) ರಷ್ಟು ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು.
8. ಆಯ್ಕೆಗೊಂಡ ಪರವಾನಗಿದಾರರು ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
9. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು.
10. ಸಂಸ್ಥೆಯ ಮಾಸಿಕ ಪರವಾನಿಗೆ ಶುಲ್ಕ ಬಾಕಿಯಿರಿಸಿಕೊಂಡಿರುವವರು ಮತ್ತು ಕರಾರು ನಿಯಮ ಉಲ್ಲಂಘಿಸಿ ನಿಗಮದಿಂದ ಕರಾರು ಒಪ್ಪಂದ ರದ್ದಾಗಿರುವವರು ಸಂಧಾನದಲ್ಲಿ ಭಾಗವಹಿಸಲು ಅರ್ಹರಲ್ಲ ಹಾಗೂ ಅರ್ಜಿ ಸಲ್ಲಿಸಿದಲ್ಲಿ ಇಎಂಡಿ. ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
11. ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
12. ಸಂಧಾನ ಪ್ರಕ್ರಿಯೆಯಲ್ಲಿ ಮಳಿಗೆಗೆ ಆಯ್ಕೆಯಾದ ಅರ್ಜಿದಾರರು ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಇನ್ಕಮ್ ಟ್ಯಾಕ್ಸ್ & ಸೇಲ್ಸ್ ಟ್ಯಾಕ್ಸ್ ಕ್ಲೆಯರೆನ್ಸ್ ಸರ್ಟಿಫಿಕೇಟ್ ಕಡ್ಡಾಯವಾಗಿ ನೀಡುವುದು.
13. ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದದೊಂದಿಗೆ ಸಂಬಂಧಪಟ್ಟ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.
14. ಆಯ್ಕೆಗೊಂಡ ಪರವಾನಗಿದಾರರು ಮಳಿಗೆಯನ್ನು ಸ್ವತ: ನಡೆಸಬೇಕು, ಪರಬಾರೆ ಮಾಡುವಂತಿಲ್ಲ.
15. ಆಯ್ಕೆಗೊಂಡ ಪರವಾನಗಿದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ ಹಣವನ್ನು ಹಿಂತಿರುಗಿಸಲಾಗುವುದು.
16. ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು ಆ ತಿಂಗಳ 07ನೇ ತಾರೀಖಿನೊಳಗೆ ಮತ್ತು ಸೇವಾ ತೆರಿಗೆಯನ್ನು ಆ ತಿಂಗಳ 05ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.
17. ಉಪಹಾರ ಗೃಹಗಳಲ್ಲಿ ಅಡಿಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು. ಉಪಹಾರ ಗೃಹದಲ್ಲಿ ಅಗ್ನಿ ರಕ್ಷಕ ಉಪಕರಣಗಳನ್ನು ಅಳವಡಿಸುವುದು.
18. ಮಳಿಗೆಗಳಲ್ಲಿ ಟೂರಿಸ್ಟ್/ಟ್ರಾವೆಲ್ ಏಜೆನ್ಸಿ, ಮಧ್ಯಪಾನ, ಮಾಂಸ ಮಾರಾಟ ಮಾಡುವುದನ್ನು ಹಾಗೂ ಪಟಾಕಿ ಮುಂತಾದ ಸ್ಪೋಟಕ ವಸ್ತುಗಳನ್ನು, ವಾಯುವ್ಯ ಮಾಲಿನ್ಯ ಮಾಡುವ ವ್ಯಾಪಾರ ಮತ್ತು ಸಂಸ್ಥೆಯ ಹಿತಕ್ಕೆ ಧಕ್ಕೆ ಬರುವ ಹಾಗೂ ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರಗಳನ್ನು ನಿಷೇಧಿಸಲಾಗಿದೆ.
19. **ಶಾಶ್ವತ ಮಳಿಗೆಗಳು ಹಾಗೂ ತೆರೆದ ಸ್ಥಳಗಳು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗುವುದು ಮತ್ತು ಸಂಧಾನದಲ್ಲಿ ನಮೂದಿಸಿರುವ ಸ್ಥಳದಲ್ಲಿ ಮಾತ್ರ ವ್ಯವಹಾರ ನಡೆಸತಕ್ಕದು.**
20. ಆಯ್ಕೆಗೊಂಡ ಪರವಾನಗಿದಾರರು ಕರ್ನಾಟಕ ಸರ್ಕಾರವು ಜಾರಿ ಮಾಡಿರುವ 1957ರ ಗ್ರಾಹಕರ ಅಧಿನಿಯಮ–6/23(1) ನಿಯಮ 23(2) ರ ಅನ್ವಯ ಗ್ರಾಹಕರಿಗೆ ಮಳಿಗೆಯಲ್ಲಿ ಮಾರಾಟ ಮಾಡುವ ವಸ್ತುಗಳ ಮೇಲೆ ತಯಾರಕರು, ನಿರ್ಧಿಷ್ಟ ಪಡಿಸಿದ ಗರಿಷ್ಟ ಬೆಲೆಗೆ ಮಾರಾಟ ಮಾಡಬೇಕಾಗಿರುತ್ತದೆ. ಗರಿಷ್ಠ ಬೆಲೆಯನ್ನು ಅಳಿಸುವುದು/ತಿದ್ದುವುದಾಗಲಿ ಇತ್ಯಾದಿಗಳು ದೂರು ಬಂದಲ್ಲಿ ನೀಡಲಾದ ಪರವಾನಗಿಯನ್ನು ರದ್ದುಪಡಿಸಲಾಗುವುದು
21. ಆಯ್ಕೆಗೊಂಡ ಪರವಾನಗಿದಾರರು ನಿಗದಿತ ಸಮಯದೊಳಗೆ ಕರಾರು ಒಪ್ಪಂದ ಮಾಡಿಕೊಂಡು ವ್ಯಾಪಾರ ನಡೆಸದಿದ್ದಲ್ಲಿ ಅವರು ನೀಡಿರುವ ಇಎಂಡಿ ಮೊತ್ತವನ್ನು ಸಂಸ್ಥೆಗೆ ಆಗುವ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
22. ಬಾಲಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
23. ತೆರೆದ ಸ್ಥಳಕ್ಕೆ ಮೂರು(03) ವರ್ಷ ಮತ್ತು ಸ್ಥಿರ ಮಳಿಗೆಗಳಿಗೆ ಐದು(05) ವರ್ಷ ಅವಧಿಗೆ ಆಯ್ಕೆಯಾದ ಅರ್ಜಿದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗುವುದು.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

24. ಅರ್ಜಿ ಸಲ್ಲಿಸುವ ಅರ್ಜಿದಾರರು ವಿಳಾಸ ದೃಢೀಕರಣ ನಕಲು ಪ್ರತಿಯನ್ನು ಗೆಜೆಟೆಡ್ ಅಧಿಕಾರಿಯವರಿಂದ ದೃಡೀಕರಿಸಿ ಸಲ್ಲಿಸಬೇಕು ಹಾಗೂ ಮೂಲಪ್ರತಿಯನ್ನು ಸಂಧಾನ ಸಮಯದಲ್ಲಿ ಸಲ್ಲಿಸುವುದು.
25. ಸ್ಕೂಟರ್ ಮತ್ತು ಸೈಕಲ್ ನಿಲ್ದಾಣದ ಅವಧಿ ಮೂರು(03) ವರ್ಷದಾಗಿರುತ್ತದೆ. ಆಯ್ಕೆಯಾದ ಪರವಾನಗಿದಾರರು ನಿಗಮವು ನಿಗದಿ ಪಡಿಸಿದ ದರದಂತೆ ಶುಲ್ಕವನ್ನು ಪಡೆಯುವುದು ಹಾಗೂ ದ್ವಿಚಕ್ರ ಪಾರ್ಕಿಂಗ್‌ಗಳಿಗೆ ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 206 'ಸಿ' ನ ಪ್ರಕಾರ ಟಿಡಿಎಸ್ ಮತ್ತು ಶೇ.15% ರಷ್ಟು ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಪಾವತಿಸಲು ಬದ್ಧರಾಗಿರಬೇಕು.
26. ಸಂಧಾನವನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
27. ಆಯ್ಕೆಗೊಂಡ ಪರವಾನಗಿದಾರರು ಕರ್ನಾಟಕ ಸರ್ಕಾರವು ಜಾರಿ ಮಾಡಿರುವ 1957ರ ಗ್ರಾಹಕರ ಅಧಿನಿಯಮ–6/23(1) ನಿಯಮ 23(2)ರ ಅನ್ವಯ ಗ್ರಾಹಕರಿಗೆ ಮಳಿಗೆಯಲ್ಲಿ ಮಾರಾಟ ಮಾಡುವ ವಸ್ತುಗಳ ಮೇಲೆ ತಯಾರಕರು, ನಿರ್ದಿಷ್ಟಪಡಿಸಿದ ಬೆಲೆಗೆ ಮಾರಾಟ ಮಾಡಬೇಕಾಗಿರುತ್ತದೆ. ಗರಿಷ್ಟ ಬೆಲೆಯನ್ನು ಅಳಿಸುವುದು/ತಿದ್ದುವುದಾಗಲಿ ಅಥವಾ ನಿಗಧಿಪಡಿಸಿ ಬೇಲೆಗಿಂತ ಹೆಚ್ಚಿ ಬೆಲೆಗೆ ಮಾರಾಟ ಮಾಡುವುದು ಇತ್ಯಾದಿ ದೂರು ಬಂದಲ್ಲಿ ದಂಡ ವಿಧಿಸುವ ಮತ್ತು ಕಾನೂನು ಕ್ರಮ ಜರುಗಿಸಲಾಗುವುದು. ಪದೇ ಪದೇ ಈ ಬಗ್ಗೆ ದೂರುಗಳು ಮರುಕಳಿಸಿದ್ದಲ್ಲಿ ನೀಡಲಾದ ಪರವಾನಗಿಯನ್ನು ರದ್ದುಪಡಿಸಲಾಗುವುದು.
28. ಆಯ್ಕೆಯಾದ ಪರವಾನಗಿದಾರರು ಮಳಿಗೆಯಲ್ಲಿ ಆಹಾರ ಪದಾರ್ಥಗಳ ದರಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಅಳವಡಿಸುವುದು.
29. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿಯಿರಿಸಿರುವ ವಾಣಿಜ್ಯ ಮಳಿಗೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ತಾಲೋಕು ತಹಶಿಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ (ಪ್ರಸ್ತುತ ವರ್ಷದ) ಇತ್ತೀಚಿಗೆ ಪಡೆದ ದೃಡೀಕರಣದ ಪತ್ರದ ನಕಲು ಪ್ರತಿಯನ್ನು ಧೃಡೀಕರಿಸಿ (ಗೆಜೆಟೆಡ್ ಅಧಿಕಾರಿಗಳಿಂದ) ಸಲ್ಲಿಸುವುದು, ಹಾಗೂ ಆಯ್ಕೆಯಾದ ಅಭ್ಯರ್ಥಿಗಳು ಸಂಧಾನದಲ್ಲಿ ಎಲ್ಲಾ ಮೂಲ ದಾಖಲಾತಿಗಳನ್ನು ಹಾಜರು ಪಡಿಸುವುದು.
30. ನಿಗಮದ/ಕರ್ನಾಟಕ ಸರ್ಕಾರ/ಭಾರತ ಸರ್ಕಾರ/ಅರೆ ಸರ್ಕಾರಿ/ಯಾವುದೇ ನಿಗಮದ ಕಪ್ಪು ಪಟ್ಟಿಯಲ್ಲಿ ಇರುವ ವ್ಯಕ್ತಿಯು ಸಂಧಾನದಲ್ಲಿ ಭಾಗವಹಿಸಲು ಅರ್ಹರಲ್ಲ.
31. ಆಯ್ಕೆಗೊಂಡ ಪರವಾನಗಿದಾರರು ಅವರ ಸಿಬ್ಬಂದಿಗಳಿಗೆ ಮೂಲವೇತನ ಕಾಯ್ದೆಯಡಿ, ಕನಿಷ್ಟ ಮೂಲವೇತನ ನೀಡುವುದು ಹಾಗೂ ಇಎಸ್‌ಐ ಮತ್ತು ಪಿಎಫ್ ಮೊತ್ತವನ್ನು ನಿಯಮಾವಳಿಗಳನ್ವಯ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಯಲ್ಲಿ ಆನ್‌ಲೈನ್ ಮುಖಾಂತರ ಪಾವತಿಸುವುದು ಹಾಗೂ ದಾಖಲೆಗಳನ್ನು ಕೆಎಸ್‌ಆರ್‌ಟಿಸಿ., ಅಧಿಕಾರಿಗಳು ಪರಿಶೀಲನೆಗೆ ಕೇಳಿದಾಗ ಪ್ರಸ್ತುತಪಡಿಸಬೇಕಾಗಿರುತ್ತದೆ.
32. ಸಂಧಾನದಲ್ಲಿ ಭಾಗವಹಿಸುವ ಅರ್ಜಿದಾರರು ಖುದ್ದಾಗಿ ಹಾಜರಿರಬೇಕು. ಹಾಗೂ ಹಾಜರಿದ್ದವರ ಸಮ್ಮುಖದಲ್ಲಿ ಸಂಧಾನ ಪ್ರಕ್ರಿಯೆ ನಡೆಸಲಾಗುವುದು. ಅರ್ಜಿದಾರರ ಯಾವುದೇ ಷರತ್ತನ್ನು ಸಂಸ್ಥೆ ಮಾನ್ಯ ಮಾಡುವುದಿಲ್ಲ, ಉಪಹಾರ ಗೃಹದಲ್ಲಿ ಅಡಿಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು. ಮತ್ತು ಆಯ್ಕೆಯಾದ ಅಭ್ಯರ್ಥಿಗಳು ಮಳಿಗೆಯಲ್ಲಿ ಕಡ್ಡಾಯವಾಗಿ ಬೆಂಕಿ ನಂದಿಸುವ ಉಪಕರಣವನ್ನು ಇಟ್ಟಿರಬೇಕು.
33. ಮೊದಲನೇ ಬಿಡ್‌ದಾರರು ಬಿಡ್ ಹಿಂಪಡೆದಲ್ಲಿ/ಹೊರ ಬಂದಲ್ಲಿ, ಅಗತ್ಯ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ, ಸರಿಯಾದ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಹಾಗೂ ನಿಗಧಿತ ಅವಧಿಯಲ್ಲಿ ಭದ್ರತಾ ಠೇವಣಿ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗು ಎರಡನೇ ಬಿಡ್‌ದಾರರ ಆಯ್ಕೆ ಮಾಡಿಕೊಳ್ಳುವ ಅಥವಾ ತಿರಸ್ಕರಿಸುವ ತೀರ್ಮಾನವನ್ನು ಕೇಂದ್ರ ಕಛೇರಿಯ ಅನುಮೋದನೆಯಂತೆ ಕ್ರಮ ಕೈಗೊಳ್ಳಲಾಗುವುದು.
34. ನಿಗಧಿತ ಪರವಾನಗಿ ಜಾರಿಗೆ ಆದ ದಿನದಿಂದಲೇ ವ್ಯವಹಾರ ಪ್ರಾರಂಭಿಸುವುದು. ತಡವಾಗಿ ಪ್ರಾರಂಭಿಸಿದ್ದಲ್ಲಿ ಕ.ರಾ.ರ.ಸಾ.ನಿಗಮವು ಹೊಣೆಗಾರರಾಗುವುದಿಲ್ಲ. ತಡವಾಗಿ ಪ್ರಾರಂಭಿಸಿದ್ದಲ್ಲಿ ತಾವೇ ನೇರ ಹೊಣೆಗಾರರು ಪರವಾನಗಿ ಪಡೆದ ಅವಧಿಯಿಂದಲೇ ನಿಗಮಕ್ಕೆ ಪಾವತಿಸಬೇಕಾದ ಎಲ್ಲಾ ಶುಲ್ಕಗಲನ್ನು ತೆರಬೇಕಾಗುತ್ತದೆ.

ಅರ್ಜಿಯೊಂದಿಗೆ ಮೇಲೆ ತಿಳಿಸಿದ ಅಗತ್ಯ ದಾಖಲೆಗಳನ್ನು ಅಡಕಗೊಳಿಸಿ **ದಿನಾಂಕ:–02–08–2016ರ ಸಮಯ:11.45ಕ್ಕೆ** ಸಂಧಾನದಲ್ಲಿ ಸಲ್ಲಿಸುವುದು. ಭಾಗವಹಿಸಲು ಇಚ್ಚಿಸುವವರು ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗ, ಮಂಡ್ಯ ಬಸ್ ನಿಲ್ದಾಣ, ಮಂಡ್ಯ ರವರಲ್ಲಿ** ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ:7760990661 ಮತ್ತು. ವಿಭಾಗೀಯ ಸಂಚಲನಾಧಿಕಾರಿ ಮೊಬೈಲ್ ಸಂಖ್ಯೆ:7760990652.

ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾರಿಗೆ ನಿಗಮ, ಮಂಡ್ಯ ವಿಭಾಗ, ಮಂಡ್ಯ.

ಪ್ರತಿಯನ್ನು ಗೌರವ ಪೂರ್ವಕವಾಗಿ:–

1) ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ಕ.ರಾ.ರ.ಸಾ. ನಿಗಮ, ಬೆಂಗಳೂರು ರವರಿಗೆ ಕಳುಹಿಸಿದೆ.
2) ಮುಖ್ಯ ಸಂಚಾರ ವ್ಯವಸ್ಥಾಪಕರು ಬೆಂಗಳೂರು ಮಹಾನಗರ ಸಾರಿಗೆ, ಈಶಾನ್ಯ ಮತ್ತು ವಾಯುವ್ಯ ಸಾರಿಗೆ ರವರ ಮಾಹಿತಿಗಾಗಿ ಕಳುಹಿಸಿದೆ.
3) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು ಕ.ರಾ.ರ.ಸಾ ನಿಗಮ ರವರುಗಳ ಮಾಹಿತಿಗಾಗಿ ಕಳುಹಿಸಿದೆ.
4) ಕಾನೂನು ಅಧಿಕಾರಿಗಳು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಲೆಕ್ಕಾಧಿಕಾರಿಗಳು, ಮತ್ತು ಭದ್ರತಾ ಮತ್ತು ಜಾಗೃತಾಧಿಕಾರಿ, ಮಂಡ್ಯ ವಿಭಾಗ ಇವರ ಮಾಹಿತಿಗಾಗಿ, ಹಾಗೂ ದಿ:–02/08/2016 ರಂದು 11.30 ಘಂಟೆಗೆ ಸಂಧಾನ_ಪ್ರಕ್ರಿಯೆ ನಡೆಯುವಾಗ ಹಾಜರಾಗಲು ತಿಳಿಸಲಾಗಿದೆ. ಸಕಾನಿಅ.ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಕೆಲಸಗಳನ್ನು ಸಂಧಾನ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.
5) ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ, ಹಾಗೂ ಬಸ್ ನಿಲ್ದಾಣದ ಮೇಲ್ವಿಚಾರಕರಿಗೆ ಘಟಕ ಮತ್ತು ಬಸ್ ನಿಲ್ದಾಣಗಳ ಸೂಚನಾ ಫಲಕದ ಮೇಲೆ ಕಡ್ಡಾಯವಾಗಿ ಪ್ರದರ್ಶಿಸಲು ಸೂಚಿಸಲಾಗಿದೆ. ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಸಂಧಾನ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.